ಕರ್ನಾಟಕ ಹಾಲು ಮಹಾಮಂಡಳಿಯ ವತಿಯಿಂದ ಪತ್ರ ಬರೆಯಲಾಗಿದೆ.

ರಾಷ್ಟ್ರೀಯ ಹೆದ್ದಾರಿಗಳು

645(751); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ರಾಜ್ಯದಲ್ಲಿ ಹೊಸದಾಗಿ ರಾಷ್ಟ್ರೀಯ ಹೆದ್ದಾರಿಗಳೆಂದು ಘೋಷಣೆ ಮಾಡಿದ ರಸ್ತೆಗಳು ಯಾವುವು; ಅವುಗಳ ವಿವರ ನೀಡುವುದು;

ಆ) ಆ ರಸ್ತೆಗಳನ್ನು ಅಭಿವೃದ್ಧಿಗೆ ಒಳಪಡಿಸಲು ಯೋಜನೆ ಹಾಕಿಕೊಳ್ಳಲಾಗಿದೆಯೇ;

ಇ) ರಾಜ್ಯ ಹೆದ್ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ರಸ್ತೆಯ ಅಗಲ ಎಷ್ಟು?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) 2013–2014 ಮತ್ತು 2014–15ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ 07 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸಲಾಗಿದೆ. ಅವುಗಳ ವಿವರಗಳನ್ನು **ಅನುಬಂಧ**ದಲ್ಲಿ ಸಲ್ಲಿಸಿದೆ.

ಆ) ಕೇಂದ್ರ ಸರ್ಕಾರದಿಂದ 2013–2014 ಮತ್ತು 2014–15ರಲ್ಲಿ ಘೋಷಿಸಲ್ಪಟ್ಟ ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನು 2 ಪಥ ಮತ್ತು ಪೇವಡ್ ಶೋಲ್ಡರ್ಸ್‌ನೊಂದಿಗೆ ಹಾಗೂ ಹಲವು ನಗರಗಳಲ್ಲಿ ಹೊರವಲಯ ರಸ್ತೆಯನ್ನು ನಿರ್ಮಿಸುವುದೊಂದಿಗೆ ಅಭಿವೃದ್ಧಿಪಡಿಸಲು ವಿವರವಾದ ಯೋಜನಾ ವರದಿ ತಯಾರಿಸುವ ಸಲುವಾಗಿ ಖಾಸಗಿ ಸಮಾಲೋಚಕರನ್ನು ನೇಮಿಸಲು ಟೆಂಡರ್‌ನ್ನು ಕರೆಯಲಾಗಿದ್ದು, ವಿಸ್ತೃತ ಯೋಜನಾ ವರದಿಯು ಸಿದ್ಧವಾದ ನಂತರ ಸದರಿ ವರದಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಿ, ಅನುಮೋದನೆಯ ನಂತರ ನಿಯಮಾನುಸಾರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ರಸ್ತೆಯ ಎಲ್ಲಾ ಪರಿಕರಗಳು ಸೇರಿದಂತೆ IRC ನಿಯಮಾವಳಿ ಅನ್ವಯ ROW 80 Meter ಆಗಿರುತ್ತದೆ.

ಎ.ಪಿ.ಎಂ.ಸಿ.ಯಲ್ಲಿ ರೈತ ಭವನಗಳನ್ನು ನಿರ್ಮಿಸುವುದು

647(1112); ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಅ) ಹಗರಿಬೊಮ್ಮನಹಳ್ಳಿ ಕ್ಷೇತ್ರ ವ್ಯಾಪ್ತಿಯ ಹೋಬಳಿ ಕೇಂದ್ರಗಳಲ್ಲಿ ಹಾಗೂ ಪಟ್ಟಣದಲ್ಲಿ ರೈತಭವನ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ರೈತಭವನಗಳನ್ನು ಯಾವಾಗ ಮಂಜೂರು ಮಾಡಲಾಗುವುದು ಹಾಗೂ ಪ್ರತಿ ರೈತಭವನಕ್ಕೆ ನಿಗಧಿಗೊಳಿಸುವ ಅನುದಾನವೆಷ್ಟು; ವಿವರ ನೀಡುವುದು?

ಡಾ॥ ಶಾಮನೂರು ಶಿವಶಂಕರಪ್ಪ (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ) **ಮತ್ತು ಆ)** ಹಗರಿಬೊಮ್ಮನಹಳ್ಳಿ ಕ್ಷೇತ್ರ ವ್ಯಾಪ್ತಿಯ ಹೋಬಳಿ ಕೇಂದ್ರಗಳು ಹಾಗೂ ಪಟ್ಟಣಗಳು ಕೃಷಿ ಮಾರಾಟ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ.

1994ನೇ ಸಾಲಿನಲ್ಲಿ ಹಗರಿಬೊಮ್ಮನಹಳ್ಳಿ, ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ರೂ. 18.12 ಲಕ್ಷಗಳ ಮೊತ್ತದಲ್ಲಿ ಒಂದು ರೈತಭವನ ನಿರ್ಮಿಸಲಾಗಿರುತ್ತದೆ.

ಸಮಿತಿ ವ್ಯಾಪ್ತಿಗೆ ಬರುವ ತಂಬ್ರಹಳ್ಳಿ ಉಪ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟು ಪ್ರಾರಂಭಿಸಿದ ನಂತರ ರೈತಭವನ ನಿರ್ಮಿಸುವ ಕುರಿತು ಕ್ರಮ ವಹಿಸಲಾಗುವುದು. ಪ್ರತಿ ರೈತಭವನಕ್ಕೆ ನಿರ್ದಿಷ್ಟವಾಗಿ ಅಂದಾಜು ಮೊತ್ತ ನಿಗಧಿಪಡಿಸಿರುವುದಿಲ್ಲ.